Reg No. M 1293
Daily & Weekly

SATYAVADI Oldest Newspaper of Mysore

ಸತ್ಯವಾದಿ

ಸಂಪುಟ 26 ಸಂಚಿಕೆ 303] ಸೋಮವಾರ 17—5—1943 [3 ಪೈ

This Space is available for Advt.

Opera — Aryamala
ಅಪೆರಾ——
ಆರ್ಯಮಾಲಾ !
ಆರ್ಯಮಾಲಾ !
ಅರ್ಯಮಾಲಾ !
ಪಿ. ಯು. ಚಿನ್ನಪ್ಪ, ಸಂತಾನಲಕ್ಷ್ಮಿ, ಶಕುಂತಲ, ಕೃಷ್ಣ, ಮಧುರಂ ಮುಂತಾದವರು ಪಾತ್ರವಹಿಸಿರುವರು

ಇಟಲಿಯವರು ಹೆದರಿರುವರು

ಇಟಲಿಯ ದೇವುಗಳ ಮೇಲೆ ಪ್ರತಿದಿವಸವೂ ಭೀಕರವಾಗಿ ವಿಮಾನಧಾಳಿಯಾಗುವುದರಿಂದಲೂ ಮಿತ್ರಪಕ್ಷದ ವಿಮಾನಗಳು ಮೆಡಿಟರೇನಿಯನ್ ಸಮುದ್ರದಲ್ಲಿ ತಾವೇತಾವಾಗಿರುವುದರಿಂದಲೂ ಯಾವ ಘಳಿಗೆಗೆ ಇಟಲಿಯ ಮೇಲೆ ಮಿತ್ರ ಸೇನೆಗಳು ಬಂದು ಇಳಿಯುತ್ತವೋ ಎಂದು ಇಟಲಿಯವರು ಹೆದರಿರುವರು. ಇಟಲಿಗೆ ಸೇರಿದ ಸಿಸಲಿ ದ್ವೀಪದ ಕಡೆ ಮಿತ್ರಪಕ್ಷದವರ ಕಣ್ಣು ಬಿದ್ದಿದೆ.

ಒಟ್ಟಾರಿನ ಅಧಿಕಾರ

ಒಟ್ಟಾರಿಗೆ ಕೊಟ್ಟ ಅಧಿಕಾರ 10-5-43 ಕ್ಕೆ ಮುಗಿಯಬೇಕಾಗಿತ್ತು. ಈಗಿನ ಪರಿಸ್ಥಿತಿಯಲ್ಲಿ ಮತ್ತೆ ಈ ಅಧಿಕಾರವು ಹೆಚ್ಚಿಸಿದೆ.

ಂ ಂ

ವಿಮಾನ ಧಾಳಿ

ಇಂಗ್ಲೆಂಡಿನ ಬಾತ್‌ನಲ್ಲಿ ಒಂದು ಕ್ರಿಕೆಟ್ ಆಟವಾಡುತ್ತಿದ್ದಾಗ ಶತ್ರು ಧಾಳಿಯಾಗಿ ಎಂಟು ಬಾಲಕರು ಸತ್ತು 12 ವ ಂದಿಗೆ ಗಾಯುಗಳಾದವು. ವಿಮಾ ಕಾರನೂ ಸತ್ತನು

ಂ ಂ

ಯುದ್ಧ ಸಮಾಪ್ತಿ ?

ಈಗಿನ ಯುದ್ಧವು ಬೇಗನೆ ಸಮಾಪ್ತಿಯಾಗುವುದೆಂದು ಮಾಜಿ ನಾಕೆಗಳ ಅಡ್ಮಿರಲ್ ಲಾರ್ಡ್ ಕಿಯಿನ್ ಹೇಳುವರು.

ಂ ಂ

ಚೈನ ಯುದ್ಧ

ಜಪಾನಿಯರಿಗೂ ಚೀನಿಗಳಿಗೂ ಚೆಕಿಯಾಂಗನಲ್ಲಿ ಬೀದಿಯಲ್ಲೆ ಯುದ್ಧವಾಗುತ್ತಿರುವುದು.

ಂ ಂ

ವ ಆಫ್ರಿಕಾದ ಎಲೆಕ್ಷನ್

ಜೂಲೈ 7 ಕ್ಕೆ ದ. ಆಫ್ರಿಕಾದಲ್ಲಿ ಎಲೆಕ್ಷನ್ ನಡೆಯಲು ಜನರಲ್ ಸ್ಮಟ್ಸ್ ಅಜ್ಞೆ ಮಾಡಿಂತ್ತಾರೆ. ಡಾ|| ಮಹಾತ್ಮರವರು ಎಲೆಕ್ಷನಲ್ಲಿ ನಿಂತು ಗೆದ್ದರೆ ಜರ್ಮನಿಯರಿಗೆ ಸಹಾಯಮಾಡುತ್ತಾರೆಂದು ಜನರಲ್ ಸ್ಮಟ್ಸ್ ಹೇಳುತ್ತಿದ್ದಾರೆ.

ಶತ್ರು ಜನರಲ್‌ಗಳು

ರಷ್ಯ ಬಿಟ್ಟು ಜರ್ಮನಿಯರ 19 ಇಟಲಿಯವರ 92 ಮಿತ್ರಸೇನೆಗಳು ಹಿಡಿದಿರುತ್ತಾರೆ. ಇವರಲ್ಲಿ 32 ಇಟಲಿಯವರ ವಿಮಾನ ಜನರಲ್‌ಗಳೂ, ಇಬ್ಬರು ಇಟಲಿರೇರ್ ಅಡ್ಮಿರಲ್‌ಗಳೂ ಸೇರಿರುತ್ತಾರೆ.

ಇಟಲಿಯವರ ಡ್ಯೂಕ್ ಆಫ್ ಆಸ್ಟರವರು ಸೆರೆಯಾಗಿದ್ದರು. ಅವರು ಈಗ ಕಾಲವಾಗಿರುವರು.

ಟಿಸಿಷಿಯಾದಲ್ಲಿ ಜರ್ಮನಿ ಮುಖ್ಯ ಸೇನಾನಾಯಕನಾಗಿದ್ದ ಜನರಲ್ ವಾನ್ ಅರ್‌ನಾಸ್‌ನನ್ನು ಇಂಗ್ಲೆಂಡಿಗೆ ವಿಮಾನದಲ್ಲಿ ತಂದಿರುತ್ತಾರೆ.

ಟ್ಯೂನಿಸ್ ಸುಲ್ತಾ

ಜನರಲ್ ಜಿರೋರವರು ರಾಜ್ಯಾಧಿಕಾರದಿಂದ ಓಡಿಸಿದರು. ಇವನು ಜರ್ಮನರಿಗೆ ಟ್ಯುನಿಷಿಯಾದಲ್ಲಿ ಆಶ್ರಯ ಕೊಟ್ಟದ್ದುದೇ ಕಾರಣ. ಅಲ್ಲದೆ ವಿಷಯ ದೊಡ್ಡ ಅಧಿಕಾರಿಗಳನ್ನು ಗಲ್ಲಿಗೇರಿಸಿದರು. ಟ್ಯೂನಿಸ್ ಬೇ ತನ್ನ 25 ಮಂದಿ ಹೆಂಡರೊಡನೆ ಮಡಗಾಸ್ಕರ್ ದ್ವೀಪಕ್ಕೆ ರವಾನೆಮಾಡಲ್ಪಟ್ಟನು. ಈತನ ಮಗನನ್ನು ರಾಜನನ್ನಾಗಿ ಮಾಡಿರುತ್ತಾರೆ.

ಇಂಡಿಯಾ ವಿಷಯ

ಹಿಂದೂಸ್ಥಾನದ ವಿಷಯವು ಬ್ರಿಟನ್ನಿನವರಿಗೆ ಚೆನ್ನಾಗಿ ತಿಳಿಯಲು ಇನು ಮುಂದೆ ಲಂಡನ್ನಿನಲ್ಲಿ ಉಪನ್ಯಾಸಗಳನ್ನು ಮಾಡುವ ಏರ್ಪಾಡಾಗಿದೆ.

ಅಮೇರಿಕಾ ಅಲಾಸ್ಕೆ ರಸ್ತೆ

ಅಮೇರಿಕಾದಿಂದ ಅಲಾಸ್ಕಾಕ್ಕೆ 1471 ಮೈಲಿಗಳಿರುವುದು. ಇದು ಬೆಟ್ಟಗುಡ್ಡ ಸೀಮೆ. ಅಮೇರಿಕಾದವರು ಈ ರಸ್ತೆಯನ್ನು ಆರು ತಿಂಗಳು ಅವಧಿಯಲ್ಲಿ ಮುಗಿಸಿದರು. ಇಷ್ಟು ಬೇಗ ಪ್ರಸಂಚದಲ್ಲಿ ಯಾರೂ ರಸ್ತೆಯನ್ನು ಮುಗಿಸಿಲ್ಲವಂತೆ. ಈ ರಸ್ತೆಯ ಅಗಲ 24 ಅಡಿಗಳು. ಇದನ್ನು ರಚಿಸಲು 10000 ಸಿಪಾಯಿಗಳು 2000 ಇತರರೂ ಕೆಲಸಮಾಡಿದರು. ದಿನಕ್ಕೆ ಎಂಟು ಮೈಲಿ ರಸ್ತೆ ತಯಾರಾಯಿತು. ಈ ರಸ್ತೆಯಲ್ಲಿ ಇನ್ನೂರು ನದಿಗಳಿಗೆ ಸೇತುವೆ ಕಟ್ಟಿದರು. ಕೆಲವು ಕಡೆ ರಸ್ತೆಯನ್ನು ಸಮುದ್ರ ಮಟ್ಟಕ್ಕಿಂತ 4212 ಅಡಿ ಎತ್ತರದಲ್ಲಿ ಮಾಡಬೇಕಾಗಿದ್ದಿತು. ಹಿಂದೆ ಅಲಾಸ್ಕಾಕ್ಕೆ ಹಡಗಿನಲ್ಲಾಗಲಿ ಇಲ್ಲವೆ ವಿಮಾನಗಳಲ್ಲಿ ಸರಕುಗಳನ್ನು ಸಾಗಿಸುತ್ತಿದ್ದರು. ಈಗ ಒಂದು ವಾರದೊಳಗಾಗಿ ಎಂಥಾ ಹಿಮಗಾಲವಾಗಲಿ ಈ ರಸ್ತೆಯಲ್ಲಿ ಸಾಗಿಸಲು ಅನುಕೂಲವಾಯಿತು. ಇದನ್ನು ರಚಿಸಲು 27 ಕೋಟಿ ರೂಪಾಯಿಗಳು ಖರ್ಚಾಗಿದೆ. ಅಂದರೆ ಒಂದು ಯುದ್ಧ ಹಡಗಿನ ಬೆಲೆಗಿಂತ ಕಮ್ಮಿ ಎನ್ನ ಬಹುದು. ಈ ಪ್ರದೇಶದಲ್ಲಿ ವಿಶೇಷವಾಗಿ ದೊರೆಯುವ ಲೋಹಗಳನ್ನೂ ತೊಲೆಗಳನ್ನೂ ಸಾಗಿಸಲು ಬಹಳ ಅನುಕೂಲವಾಯಿತು. ಈ ರಸ್ತೆ ನಿರ್ಮಾಣದಿಂದ ಜೈನಾಕ್ಕೂ ರಷ್ಯಾಕ್ಕೂ ಯುದ್ಧ ಸಾಮಗ್ರಿಗಳನ್ನು ಕಳುಹಿಸಲು ಅನುಕೂಲವಾಯಿತು ಅಲಾಸ್ಕದಲ್ಲಿ ಪ್ರಜಾಸಂಖ್ಯೆ 7200. ಆದರೂ ಇವರೆಲ್ಲರೂ ಮೀನು ಹಿಡಿಯುವುದು ಗಣಿ ಕೆಲಸ ಮಾಡಿ ಜೀವಿಸುವುದು, ಗಣಿಗಳಿಂದ ಚಿನ್ನವನ್ನು ಸಹ ತೆಗೆಯುವರು. ತೊಲೆಗಳಿಂದ ವಂದ ಮನೆಗಳನ್ನು ತಯಾರ್ಮಾಡುವರು. ಈ ರಸ್ತೆಯ ಕೆಲ ಭಾಗವು ಕೆನಡಾ ಪ್ರದೇಶದಲ್ಲಿರುವುದರಿಂದ ಈ ಎರಡು ರಾಜ್ಯವು ಈ ರಸ್ತೆಯ ಉಪಯೋಗವನ್ನು ಹೊಂದುವುವು.

ಪ್ರಮಾಣಗಳ ವಿಧಾನ

ಯಹೂದ್ಯರು ತಲೆ ಮುಚ್ಚಿಕೊಂಡು ಬಲಗೈಯ್ಯಲ್ಲಿ ತನ್ನ ವೇದ ವಾಕ್ಯದ ಪುಸ್ತಕವನ್ನು ಹಿಡಿದುಕ್ಕೊಂಡು ಪ್ರತಿಜ್ಞೆ ಮಾಡುವರು. ಮುಸಲ್ಮಾನರು ಬಲಗೈಯನ್ನು ಕುರಾನ್ ಮೇಲಿಟ್ಟುಕ್ಕೊಂಡು ಎಡಗೈಯನ್ನು ಹಣೆಯ ಮೇಲಿಟ್ಟುಕ್ಕೊಂಡು ತಮ್ಮ ತಲೆಯನ್ನು ಕುರಾನ್‌ಗೆ ತಗಲಿಸುವರು. ಸಿಕ್ಕರು ತಮ್ಮ ಗ್ರಂಥವನ್ನೂ, ಪಾರ್ಸಿಗಳು ಜಿಂಡ್ ಅವೇಷ್ಟ ಪುಸ್ತಕವನ್ನು ಹಿಡಿದುಕ್ಕೊಂಡು ಪ್ರತಿಜ್ಞೆ ಮಾಡುವರು. ಆಫ್ರಿಕಾ ಕಫಿತ ಕಾಡು ಜನರು ತಮ್ಮ ರಾಜನ ಹೆಸರಿನಲ್ಲಿಯೂ ಅವನ ರಾಜನ ಇಂಗ್ಲೀಷ್ ಚಕ್ರವರ್ತಿಯ ಹೆಸರಿನಲ್ಲಿಯೂ ವಚನ ತೆಗೆದುಕೊಳ್ಳುವರು. ಸೈಬಿರಿಯಾದಲ್ಲಿ ಒಂದು ಕರಡಿಯ ತಲೆಯನ್ನು ಕೋರ್ಟಿಗೆ ತರುವರು ನಿಜ ಹೇಳದಿದ್ದರೆ ಕರಡಿಯು ಇವರನ್ನು ತಿನ್ನುವುದೆಂದೂ ಹೇಳಿಸುವರು. ಅಸ್ಸಾಂನಲ್ಲಿರುವ ನಾಗಾಜನರು ನಾಯಿ ಅಥವ ಹುಂಜನನ್ನು ಕೋರ್ಟಿಗೆ ಹಾಜರ್ಮಾಡುವರು. ಒಬ್ಬನು ತಲೆ ಇನ್ನೊಬ್ಬನು ಕಾಲು ಇವರಿಬ್ಬರು ತಮ್ಮ ತಮ್ಮ ಕಡೆ ಗಟ್ಟಿಯಾಗಿ ಎಳೆಯುವರು. ಇನ್ನೊಬ್ಬನು ಚಾಕುವಿನಿಂದ ಮಧ್ಯದಲ್ಲಿ ಒಂದೇ ಏಟಿಗೆ ಎರಡು ಪಾಲು ಮಾಡುವನು.

ಫಿಜಿಯಲ್ಲಿರುವ ಭಾರತೀಯರ 1000 ಮಂ ಜಾರ್ ತಿಂಗಳೊಳಗಾಗಿ ಸೈನ್ಯಕ್ಕೆ ಬಂದು ಸೇರಬೇಕು. ಇಲ್ಲವಾದರೆ ಯುದ್ಧಕ್ಕೆ ಎಲ್ಲರೂ ಸೇರುವ ಕಾಯಿದೆಯನ್ನು ಚಲಾಯಿಸಲಾಗುವುದು. ಎಂದು ಫಿಜೀ ಸರ್ಕಾರವ ಆಜ್ಞೆ ಹೊರಟಿರುವದು ಈಗಾಗಲೇ ಸಾವಿರಾರು ಭಾರತೀಯರು ಸೈನ್ಯಕ್ಕೆ ಸೇರಿರುವರು. ಇಲ್ಲವೇ ಯುದ್ಧದ ಕೂಲಿಗಳಾಗಿ ಕೆಲಸ ಮಾಡುತ್ತಿರುವರು.

Edited, Printed & published by M. S. Krishna Rao, at the Satyavadi Press. Chamaraja Agrahar, Mysore.

ಗಾಂಧೀಜಿ ವಿಷಯದಲ್ಲಿ

ನವನಗರದ ಜಾಂ ಸಾಹೇಬರ ಹೇಳಿಕೆ

ನವನಗರದ ಮಹಾರಾಜರಾದ ಜಾಂ ಸಾಹೇಬರು ಲಂಡನ್ನಿನಲ್ಲಿ ಒಬ್ಬ ಪತ್ರಿಕಾಕರ್ತರಿಗೆ ಹೀಗೆ ಹೇಳಿದರು.—

ಕಾಂಗ್ರೆಸ್ ಗಾಂಧೀಜಿ ಕೈಲಿದೆ ಅವರು ಬದುಕಿರುವವರೆಗೆ ಅವರನ್ನು ಎದುರಿಸುವವರು ಯಾರೂ ಇಲ್ಲ. ಆಗಾಗ್ಗೆ ಅವರು ವಿಶ್ರಾಂತಿ ತೆಗೆದುಕೊಳ್ಳುವರು. ಅದು ಹೆಚ್ಚಲ್ಲ ಕಾಲವಲ್ಲ. ಕಾಂಗ್ರೆಸ್ಸಿನವರು ಏನು ಮಾಡಬೇಕಾದರೂ ಇವರ ಸಲಹೆಯನ್ನು ತೆಗೆದುಕೊಳ್ಳುವರು. ಇವರ ಸಂಗಡ ಇರುವವರಲ್ಲಿ ಐಕ್ಯಮತ್ಯವಿಲ್ಲ. ಇವರು ಸತ್ತರೆ ಕಾಂಗ್ರೆಸ್ ಮೂರು ಭಾಗವಾಗುವುದು— ನೆಹ್ರೂರವರ ಪಾರ್ಟಿ ಒಂದು. ಎರಡನೇದು ವಲ್ಲಭಭಾಯಿ ಪಟೇಲರ ಪಾರ್ಟಿ, ಮೂರನೇದು ಶ್ರೀ ರಾಜಗೋಪಾಲಾಚಾರ್ಯರ ಪಾರ್ಟಿ. ಭಾರತದವರ ಮನಸ್ಸು ಯಾವ ರೀತಿ ಇದೆ ಎನ್ನುವುದು ಗಾಂಧೀಜಿ ಏನು ಪ್ರಪಂಚದಲ್ಲಿ ಮತ್ಯಾರಿಗೂ ತಿಳಿಯದು. ನಾವು ವಿಜಾತಿಯ ಜನರು, ನಮ್ಮನ್ನು ಯಾರಾದರೂ ಯಾಚಿಸಿದರೆ ನಾವು ಏನೂ ಸಹಾಯ ಮಾಡುವುದಿಲ್ಲ, ಆದರೆ ಒಬ್ಬ ಸನ್ಯಾಸಿಯು ಯಾಚಿಸಿದರೆ ನನ್ನ ಐಶ್ವರ್ಯವನ್ನೆಲ್ಲಾ ಕೊಡುತ್ತೇನೆ. ಪ್ರತಿ ಹಳ್ಳಿಯಲ್ಲಿಯೂ ಒಬ್ಬ ಸಾಧು ಇರುತ್ತಾನೆ; ಭರೀ ಮೈಯಲ್ಲಿ ಕೊಡುತ್ತಾನೆ. ಮೈಗೆಲ್ಲಾ ಬೂದಿಯನ್ನು ಬಳಿದುಕೊಂಡಿರುತ್ತಾನೆ.

ಗಾಂಧೀಜಿ ರಾಷ್ಟ್ರಕ್ಕೆ ಸಾಧು. ದೇಹವ ಕಡೆ ಲಕ್ಷ್ಯ ಕೊಡುವುದಿಲ್ಲ. ದಾರಿದ್ರ್ಯವನ್ನು ಅಪೇಕ್ಷಿಸುವರು, ಇವರ ಸ್ನೇಹಿತರೆಲ್ಲಾ ಲಕ್ಷಾಧೀಶ್ವರರು. ಇವರು ರೈಲಿನಲ್ಲಿ 3 ನೇ ತರಗತಿಯಲ್ಲಿ ಪ್ರಯಾಣ ಮಾಡುವರು. ಕೆಲವು ವೇಳೆ 100 ಜನ ಕೂಡುವ 3 ನೇ ತರಗತಿಯ ಗಾಡಿಯನ್ನು ಇವರಿಗೆ ವಿಶೇಷವಾಗಿಡುವರು. ಗಾಂಧೀಜಿಯವರ ರೌಂಡ್ ಟೇಬಲ್ ಕಾನ್ಫರೆನ್ಸಿಗೆ ಹೋದಾಗಲೆಲ್ಲಾ ಅವರು ಕೂಲಿಯವರು ವಾಸವಾಡುವ ಕೇರಿಯಲ್ಲಿ ವಾಸವಾಡುವರೆಂದು ತಿಳಿದಿತ್ತು. ಇವರು ಬೆಳಿಗ್ಗೆ ಶ್ರೀಮಂತರ ಮನೆಯಲ್ಲಿರುತ್ತಿದ್ದರು.

ಕೆಲವರು ಗಾಂಧೀಜಿಯವರಿಗೆ ಈ ದೊಡ್ಡತ್ತಿಗೆ ಬರಲು ಬ್ರಿಟಿಷರೇ ಕಾರಣರೆಂದು ಹೇಳುವರು. ನನಗೆ ತಿಳಿಯಬಂದದ್ದು ವರ್ತಮಾನಪತ್ರಿಕೆಯವರಿಂದಲೇ ಎನ್ನಬಹುದು. ಇವರು ವೈಸರಾಯರನ್ನು ನೋಡಲು ಬಂದಾಗ, ವೈಸರಾಯ ಭವನದ ಗಾರ್ಡಾಸ್ತರು ಕೈಕಟ್ಟಿಕೊಂಡು ನಿಂತುಕೊಂಡಿದ್ದೂ, ವೈಸರಾಯರನ್ನು ನೋಡಲು ಒರುವಾಗಲೂ ಪಂಚೆಯನ್ನುಟ್ಟುಕೊಂಡು ಬರುವುದೂ ಯಾರಿಗೆ ತಾನೆ ಇವರನ್ನು ದೇವರಹಾಗೆ ಪೂಜಿಸಲು ವಾಸನ್ನು ಹಿಂಜರಿಯುವುದು.

ನಾನು ಬ್ರಿಟಿಷ್ ಸರ್ಕಾರಕ್ಕೆ ಹೇಳುವುದು ವೈಸರಾಯರು ಎಕ್ಸ್ಯೂಟಿವ್ ಕೌನ್ಸಿಲಿನ 12 ಸದಸ್ಯರನ್ನು ಹಿಂದೂಸ್ಥಾನದವರಿಗೇನೇ ಕೊಡಿ ಹಣಕಾಸಿನ, ಯುದ್ಧ ಈ ಪದವಿಯ ಸದಸ್ಯತ್ವ ಇವರಿಗೇನೇ ಕೊಡಿ ಮಿಲಿಟರಿ ಹುದ್ದೆಯು ಈಗಿನ ಹಾಗೆ ಕಮಾಂಡರ್-ಇನ್-ಛೀಫ್ ಜೈಲರಲಿ. ಇನ್ನು ಮುಂದೆ ಕೌನ್ಸಿಲ್ ಒದಲು ಕ್ಯಾಬಿನೆಟ್ ಎಂದು ಕರೆಯಿರಿ. ಇನ್ನು ಮುಂದೆ ಇಲ್ಲಿನ ಆಡಳಿತದಲ್ಲಿ ಬ್ರಿಟಿಷ್ ಸರ್ಕಾರದವರು ಕೈಹಾಕದಿರಲಿ.

ಹೆಚ್. ಆರ್. ಜಿ. ಸಿ. ಯವರ

ಶ್ರೀ ಪಿಕ್ಚರ್ಸ್ ತಯಾರಿಕೆ

ವಾಣಿ ಎಂಬ ಕನ್ನಡ ಸಾಮಾಜಿಕ ಚಿತ್ರ

ನಿಮ್ಮ ಮನರಂಜನೆಗಾಗಿ ಬೇಗಲೇ ಬರಲಿದೆ

ಸಂಗೀತರತ್ನ ಟಿ. ಚೌಡಯ್ಯ, ಕಲ್ಚರ್ ಕಮೆಡಿಯನ್ ಕೆ. ಹಿರಣ್ಣಯ್ಯ, ಗಾಯನಗಾಂಧರ್ವ ಚಂಪೆ ವೈದ್ಯನಾಥ ಭಾಗವತರ್ ಮೃದಂಗವಿದ್ವಾನ್ ಮಣಿ ಕೋಕಿಲಕಂಠ ಬಳ್ಳಾರಿ ಲಲಿತ, ಚಂದ್ರಮ್ಮ, ರತ್ನ, ಪಂಡರೀಬಾಯಿ ಧನಭಾಗ್ಯಂ ಎ. ನಾರಾಯಣರಾವ್, ಕೆ. ಎಂ. ಮಹದೇವ್, ಮಾಸ್ಟರ್ ಬಿ. ವಿ. ಕೆ. ಮೂರ್ತಿ ಮುಂತಾದವರು ತಾರಾಗಣದಲ್ಲಿದ್ದಾರೆ.

ನಿರ್ದೇಶಕರು— ಜಿ. ಆರ್. ರಾಮಯ್ಯನವರು

ಸಂಗೀತ ನಿರ್ದೇಶಕರು— ಸಂಗೀತರತ್ನ ಟಿ. ಚೌಡಯ್ಯನವರು

ತಯಾರಿಕೆ— ಸಾಹುಕಾರ್ ಟಿ. ಎಸ್. ಶಿವಬಸವಸ್ವಾಮಿ

ಕಥಾ ಮತ್ತು ದಿಗ್ದರ್ಶಕರು— ಕೆ. ಹಿರಣ್ಣಯ್ಯ ಮತ್ತು ಎಂ. ಎಸ್. ಗೋಪಾಲ್.

ಸ್ಟೂಡಿಯೊ—ಸೆಂಟ್ರಲ್ ಸ್ಟೂಡಿಯೋಸ್ ಲಿಮಿಟೆಡ್, ಕೊಯಮತ್ತೂರು

ಶಕ್ತಿ ಸಾಧನೆಗೆ ಸುಲಭೋಪಾಯವು



ಸೇವನೆ ಎಂಬುವುದು ನಿಮ್ಮ ಜ್ಞಾಪಕದಲ್ಲಿರಲಿ

ಅನೇಕರಿಂದ ಪ್ರಶಂಸಿಸಲ್ಪಟ್ಟಿದೆ. ವಸ್ತುಪ್ರದರ್ಶನಗಳಲ್ಲಿ ಪ್ರಾಶಸ್ತ್ಯವನ್ನು ಪಡೆದಿದೆ

ಬೆಲೆ 1 ರೂಪಾಯಿ

ಅಖಿಲಭಾರತೀಯ ಸವರ್ಕರ್ರು ಸನ್ಮಾನ ಮಂಡಲಿ

28—5—43 ಶ್ರೀ ಸವರ್ಕರ್ರವರ ಜನ್ಮ ದಿನ. ಈ 61 ನೇ ಜನ್ಮದಿನದ ಸಂದರ್ಭದಲ್ಲಿ ಹಿಂದೂ ಮಹಾಸಭೆಯ ಅಧ್ಯಕ್ಷರಾದ ಶ್ರೀ ವೀರ ಸವರ್ಕರರನ್ನು ಗೌರವಿಸಲು ಭಾರತೀಯರು ಯೋಚಿಸಿರುವುದು ಒಳ್ಳೆ ಸಂತೋಷದಾಯಕವಾದ ವಿಷಯವೇ ಸರಿ. ಶ್ರೀ ಸವರ್ಕರರವರು ಒಂದು ಅಸಾಧಾರಣ ವ್ಯಕ್ತಿ. ಈತನಂತಹ ಅಮೂಲ್ಯ ರತ್ನವನ್ನು ಹೆತ್ತು ಪೋಷಿಸಿ ಭಾರತಮಾತೆಯು ಗೌರವಿಸುತ್ತಿದೆ ಈತನ ನಿರಂಜನಮೂರ್ತಿ ಒಂದು ಚಾತುರ್ಯ, ವಿಸ್ಮಯಜನಕವಾದ ವ್ಯಕ್ತಿತ್ವ, ಅದಮ್ಯನೀಯವಾದ ಉತ್ಸಾಹ ಆಶ್ಚರ್ಯಕರವಾದ ಭಾಷಣ ಪಟುತ್ವ, ಹೇತುಯುಕ್ತವಾದ ತರ್ಕ, ಅಂತರ್ಜಾತೀಯ ಯಥಾರ್ಥ ಸ್ಥಿತಿಯನ್ನೂ ಶೀಘ್ರವಾಗಿ ಗ್ರಹಿಸುವ ವೇಧಾಶಕ್ತಿ ಸರ್ವತೋಮುಖವಾದ ದೇಶಸೇವೆ ಅಕುಲನೀಯವಾದ ಡಂಭಶೂನ್ಯವಾದ ತ್ಯಾಗ, ವಿಜಯುವಂತವಾದ ರಾಜನೀತಿ ಇವು ಸರಿಹೋಲಿಸಲಾಗದಂಥವುಗಳು. ಯುವಕರ ಮನೋದೇವತೆಯು ಸವರ್ಕರು. ಹಿಂದೂಮಾತೆಯ ಸುಪುತ್ರರಲ್ಲಿ ಅಗ್ರಗಣ್ಯನು ಈತನು. ನವಯುಗ ಸ್ರವರ್ತಕನು ಹಾಗೂ ರಾಜಸ್ಮೃತಿಕ್ಷೇತ್ರದಲ್ಲಿ ತ್ರಿಕಾಲದರ್ಶಿಯೂ, ತತ್ವವೇತ್ತನೂ ಈತನು.

ತನ್ನ 7 ನೆಯ ವಯಸ್ಸಿನಲ್ಲಿಯೇ ಕುಲದೇವತೆಯ ಸಮ್ಮುಖದಲ್ಲಿ ಮಾತೃ ಸೇವಾಕಾರ್ಯದಲ್ಲಿ ಆತ್ಮಸಮರ್ಪಣೆಯನ್ನು ಮಾಡುವದಾಗಿ ಶಪಥವನ್ನು ಮಾಡಿ ಅಂದಿನಿಂದ ತನ್ನ ಪ್ರತಿಜ್ಞಾಪೂರ್ತ್ಯರ್ಥವಾಗಿ ಯಾವಶ್ಯಕ್ಕಿಯನ್ನು ಏನಿಯೋಗಿಸುವ ಕರ್ಮವೀರನು ಸವರ್ಕರು. ಸ್ಫೂರ್ತಿವ್ರದವಾದ ಕವಿತೆಗಳ ಮೂಲಕ ನಾಟಕಗಳ ಮೂಲಕ, ಕಲ್ಪನಾ ಕಥೆಗಳ ಮೂಲಕ ಉಪನ್ಯಾಸಗಳ ಮೂಲಕ ತನ್ನ ಬಾಲ್ಯದಿಂದಲೂ ಸ್ವದೇಶೀಯರಲ್ಲಿ ಸ್ವಾತಂತ್ರ್ಯ ಕಾಂಕ್ಷೆಯನ್ನುಂಟು ಮಾಡಿದ ತ್ಯಾಗಿ ಮಹನೀಯನು ಈತನೇ. ಆ ಜನ್ಮ ಕಾರಾಗಾರ ತೀಕ್ಷ್ಣಯನ್ನು ಹೊಂದಿದ ತಪಸ್ವಿಯು ಈತನು. ಅಂಡಮಾನು ದ್ವೀಪಗಳಲ್ಲಿದ್ದಾಗ ಶುದ್ಧಿ, ಸಾಕ್ಷರತಾ ಪ್ರಚಾರ, ಅಸ್ಪೃಶ್ಯತಾ ನಿವಾರಣೆಗಳನ್ನೂ ಖೈದಿಗಳಲ್ಲಿ ಜಾರಿಗೆ ತಂದು ಸರ್ಕಾರದ ಉದ್ಯೋಗಿಗಳ ಮನ್ನಣೆಯನ್ನು ಪಡೆದ ಪ್ರಜಾಹಿತೈಷಿಯು ಸವರ್ಕರು. ಈತನ ತಪಸ್ಸೂ ತ್ಯಾಗವೂ ಸ್ತುತ್ಯವಾದವುಗಳು.